[Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1615/2022**

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 12

ಸಾಕ್ಷಿದಾರನ ಹೆಸರು : ಎಮ್.ಎ. ಬಷೀರ್

ತಂದೆಯ ಹೆಸರು : ಹಸನಬ್ಬ

ಪ್ರಾಯ : 49 ವರ್ಷ

ಉದ್ಯೋಗ : ಗುಜರಿ ಅಂಗಡಿ

ವಾಸ : ಪುತ್ತಿಗೆ ಗ್ರಾಮ, ಮೂಡಬಿದ್ರೆ

ದಿನಾಂಕ 28-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

1 ನೇ ಆರೋಪಿ ಪರಿಚಯವಿರುದಿಲ್ಲ. ನನ್ನ ಸಮಕ್ಷಮ ಯಾವುದೇ ವ್ಯಕ್ತಿ ಕಳುವು ಮಾಡಿದ ಜಾನುವಾರು ಕಟ್ಟಿ ಹಾಕಿದ ಸ್ಥಳವನ್ನು ತೋರಿಸಿ ಕೊಟ್ಟಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರು ಮಾಡಿ ಭಾವಚಿತ್ರ ತೆಗೆದಿರುವುದಿಲ್ಲ. ಸಾಕ್ಷಿಯು ದಿಃ 09-06-2022 ರ ಆರೋಪಿ ತೋರಿಸಿಕೊಟ್ಟಂತೆ ಜಾನುವಾರು ಕಟ್ಟಿದ ಸ್ಥಳದ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಎಲ್ಲಿ, ಯಾವಾಗ, ಯಾವ ವಿಚಾರಕ್ಕಾಗಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಯು ನಿಪಿ-10 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಪೋಲಿಸರು ಹೇಳಿದ ಮೇರೆಗೆ ಭಾವಚಿತ್ರಕ್ಕೆ ನಿಂತಿದ್ದು, ಯಾವ ಉದ್ದೇಶಕ್ಕಾಗಿ ಭಾವಚಿತ್ರ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು ፡ ಸಹಾಯಕ ಸರ್ಕಾರಿ ಅಭಿಯೋಜಕರು:-

ದಿಃ 09-06-2022 ರಂದು ಪೋಲಿಸರು 1 ನೇ ಆರೋಪಿ ತೋರಿಸಿಕೊಟ್ಟಂತೆ ಮೂಡಬಿದ್ರೆ ತಾಲೂಕು, ಪುತ್ತಿಗೆ ಗ್ರಾಮದ, ಹುದೇಲು ಎಂಬಲ್ಲಿ ಸರ್ಕಾರಿ ಹಾಡಿಯಲ್ಲಿ ಕಳುವು ಮಾಡಿದ ಜಾನುವಾರು ಕಟ್ಟಿದ್ದ ಸ್ಥಳದ ಮಹಜರನ್ನು ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನನ್ನ ಹಾಗೂ ಚಾಸಾ-11 ರವರ ಸಮಕ್ಷಮ ತಯಾರಿಸಿ, ಭಾವಚಿತ್ರ ತೆಗೆದು ಸ್ಥಳದಲ್ಲಿಯೇ ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ፡ ಆರೋಪಿತರ ಪರ ፡ ಶ್ರೀ ಬಿ.ಎಮ್.ಎಸ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ